ಸಿ.ಸಿ.ನಂ. 20744/2013

ಪ್ರಾಸಾ: 1

ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

| | |
|---|---|
| ಸಾಕ್ಷಿದಾರರ ಹೆಸರು | ಶ್ರೀನಿವಾಸ್ ಎಸ್ |
| ತಂದೆಯ ಹೆಸರು | ಸಿದ್ದೇಗೌಡ |
| ವಯಸ್ಸು | 46 ವರ್ಷ |
| ಉದ್ಯೋಗ | ಹೆಚ್.ಸಿ 7957 |
| ವಾಸ | ತಲಘಟ್ಟ ಪುರ |

ಇಂದು ದಿನಾಂಕ: **17.09.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆ** ದಂ.ಸಂ.ಪ್ರ. ಕಲಂ **299** ರಡಿಯಲ್ಲಿ **ಹಿರಿಯ ಸಸಅ ಅವರಿಂದ:**

1. ನಾನು ಜುಲೈ 2022 ರಿಂದ ಇಲ್ಲಿಯವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.
2. ಈ ಪ್ರಕರಣದ 5 ನೇ ಆರೋಪಿ ವಿರುದ್ಧ ಉದ್ಘೋಷಣೆ ಮಾಡಲು ನ್ಯಾಯಾಲಯದಿಂದ ವಾರೆಂಟ್ ಬಂದಿರುತ್ತದೆ. ಸದರಿ ವಾರೆಂಟ್ ಅನುಸಾರ ತಿಲಕ್ ನಗರ ಪೊಲೀಸ್ ಠಾಣಾ ವ್ಯಾಪ್ತಿಯ 5 ನೇ ಆರೋಪಿಯ ವಿಳಾಸ 32 ನೇ ಇ ಕ್ರಾಸ್, ಈಸ್ಟ್ ಎಂಡ್ ಮುಖ್ಯರಸ್ತೆಯ ಸರ್ಕಲ್, ಬೆಂಗಳೂರು ಇಲ್ಲಿಗೆ ಹೋಗಿ ಅಲ್ಲಿರುವ ಜನರಲ್ಲಿ 5 ನೇ ಆರೋಪಿಯ ಕುರಿತು ವಿಚಾರಿಸಿದಾಗ ಯಾವುದೇ ಮಾಹಿತಿ ಸಿಗಲಿಲ್ಲ. ನಾನು, ರಂಗಸ್ವಾಮಿ ಮತ್ತು ಉಮೇಶ್ ಎಂಬ ಇಬ್ಬರು ಪಂಚರನ್ನು ಸ್ಥಳದಲ್ಲಿಯೇ ಕರೆದುಕೊಂಡೆ. ಅಲ್ಲಿ ಸೇರಿದ ಜನರ ಮುಂದೆ 5 ನೇ ಆರೋಪಿಯ ಹಾಜರಾತಿ ಸಲುವಾಗಿ ನೀಡಿದ ಉದ್ಘೋಷಣೆಯನ್ನು ಜೋರಾಗಿ

ಕೂಗಿ ಹೇಳಿದೆವು. ನಂತರ ಸದರಿ ಉದ್ಘೋಷಣೆಯ ಬಿತ್ತಿ ಪತ್ರಗಳನ್ನು ಅಲ್ಲಿರುವ ಈಸ್ಟ್ ಎಂಡ್ ಮುಖ್ಯರಸ್ತೆಯಲ್ಲಿ ಇರುವ ನಾಗ ಪಂಚಮಿ ದೇವಸ್ಥಾನದ ಗೋಡೆಗೆ, ಬ್ಯಾಂಕ್ ಆಫ್ ಬರೋಡ ಗೋಡೆಗೆ, ಕಾರ್ಮೆಲ್ ಕಾನ್ವೆಂಟ್ ಗೋಡೆಗೆ ಅಂಟಿಸಿದೆನು. ಈ ಕುರಿತು ಪಂಚನಾಮೆಯನ್ನು ಮಧ್ಯಾಹ್ನ 1.00 ರಿಂದ 2.00 ರವರೆಗೆ ಜರುಗಿಸಿದೆನು.

3. ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

**(ರಂಗೇಗೌಡ ಸಿ)**

**ಮು. ಮ. ಚಂ. ನ್ಯಾ. ಬೆಂ. ನಗರ.**